RNU AIR DHARWAD

JULY 05, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1. 'ಉತ್ತಮ ಪ್ರಪಂಚಕ್ಕಾಗಿ, ಸಹಕಾರಿ ಸಂಸ್ಥೆಗಳು; ಸಮಗ್ರ ಹಾಗೂ ಸುಸ್ಥಿರ ಪರಿಹಾರೋಪಾಯಗಳಿಗೆ ಚಾಲನೆ' ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಸಹಕಾರಿ ದಿನಾಚರಣೆ. ವಿಶ್ವ ಸಂಸ್ಥೆ, ಪ್ರಸಕ್ತ 2025 ನ್ನು, ಸಹಕಾರಿ ವರ್ಷ ಎಂದು ಘೋಷಿಸಿದೆ. ಪ್ರದೇಶ ಸಮಾಚಾರಕ್ಕಾಗಿ, ಈ ಬಗ್ಗೆ, ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ನೂಲ್ವಿಯ ಕೆ.ಸಿ.ಸಿ. – ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ವ್ಯವಸ್ಥಾಪಕ, ಪ್ರಸಾದ ಹೊಂಗಲ.**

<><><>

**ಪ್ರಸಾದ ಹೊಂಗಲ ಧ್ವನಿ 35 ಸೆಕೆಂದುಗಳು**

<><><>

**2. ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕು, ಚನ್ನರಾಯಪಟ್ಟಣದ, ವಿವಿಧ ಗ್ರಾಮಗಳ ಭೂ ಸ್ವಾಧೀನ ಪ್ರಕ್ರಿಯೆ ಕುರಿತಂತೆ, ರೈತ ಮುಖಂಡರೊಂದಿಗೆ, ವಿಧಾನಸೌಧದಲ್ಲಿ ಸಭೆ ನಡೆಸಿದರು.**

<><><>

**3. ಭಾರತದ ಮೊಟ್ಟ ಮೊದಲ, ಅಂತಾರಾಷ್ಟ್ರೀಯ ಜಾವೆಲಿನ್ ಥ್ರೋ ಸ್ಪರ್ಧೆಗೆ, ಬೆಂಗಳೂರಿನ ಕಂಠೀರವ ಕ್ರೀಡಾಂಗಣ ಸಜ್ಜಾಗಿದೆ. ಭಾರತೀಯ ಅಥ್ಲೆಟಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ, ಹೊಸ ಅಧ್ಯಾಯಕ್ಕೆ ಇಂದು ಸಂಜೆ 7 ಗಂಟೆಗೆ, ಮುನ್ನುಡಿ ಬರೆಯಲಿದೆ. ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಜಯಿಸಿರುವ, ನೀರಜ್ ಚೋಪ್ರಾ ಗೌರವಾರ್ಥ, ನೀರಜ್ ಚೋಪ್ರಾ ಕ್ಲಾಸಿಕ್ ಅಂತಾರಾಷ್ಟ್ರೀಯ ಜಾವೆಲಿನ್ ಥ್ರೋ ಸ್ಪರ್ಧೆ ಆಯೋಜಿತವಾಗಿದೆ.**

<><><>

**4. ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲೂಕು, ಚೌಡಯ್ಯದಾನಪುರದ, ಶ್ರೀ ಅಂಬಿಗರ ಚೌಡಯ್ಯನವರ, ಗದ್ದುಗೆಯ ಅಭಿವೃದ್ಧಿಗೆ, ಕೇಂದ್ರ ಪುರಾತತ್ವ ಇಲಾಖೆಯೊಂದಿಗೆ, ಸಮಾಲೋಚಿಸುತ್ತಿರುವುದಾಗಿ, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಸಣ್ಣ ನೀರಾವರಿ ಇಲಾಖೆ, ರಾಣಿಬೆನ್ನೂರಿನ ದೊಡ್ಡ ಕೆರೆ ಅಭಿವೃದ್ಧಿಗೆ, 20 ಕೋಟಿ ರೂಪಾಯಿ ಯೋಜನೆ ರೂಪಿಸಿದೆ. ಪಕ್ಷಿಧಾಮ, ದೋಣಿ ವಿಹಾರ ಹಾಗೂ ವಿಜ್ಞಾನ ಉದ್ಯಾನ ಸಹ ರೂಪುಗೊಳ್ಳಲಿದೆ. ದೇವರಗುಡ್ಡದ ಶ್ರೀ ಮಾಲತೇಶ ದೇವಸ್ಥಾನಕ್ಕೆ ರೋಪ್ ವೇ, ಕಾಮಗಾರಿ ಪ್ರಗತಿಯಲ್ಲಿದೆ ಎಂದರು.**

<><><>

**5. ಪೆಟ್ರೋಲ್ ಮತ್ತು ಡಿಸೇಲ್ ನಿಂದ, ರಾಜ್ಯಕ್ಕೆ ಸಂದಾಯವಾಗುವ, ತೆರಿಗೆ ಹಣದಲ್ಲಿ, ಶೇಕಡ 1 ರಷ್ಟನ್ನು, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ನೀಡುವಂತೆ, ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದಾಗಿ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಬೆಂಗಳೂರಿನಲ್ಲಿ, ತಿಳಿಸಿದ್ದಾರೆ.**

<><><>

**6.** ಬೆಳಗಾವಿಯ ಕೆ.ಎಲ್.ಇ. ವಿಶ್ವನಾಥ ಕತ್ತಿ ದಂತ ಮಹಾವಿದ್ಯಾಲಯದ, ಪ್ರೊಸ್ಥೊಡಾಂಟಿಕ್ಸ್ ವಿಭಾಗದ ಪ್ರಾಧ್ಯಾಪಕ, ಡಾಕ್ಟರ್ ಆನಂದಕುಮಾರ ಪಾಟೀಲ, ಭಾರತೀಯ ಪ್ರೊಸ್ಥೊಡಾಂಟಿಕ್ ಸೊಸೈಟಿ, ಕರ್ನಾಟಕ ಶಾಖೆಯ ಅಧ್ಯಕ್ಷರಾಗಿ, ನಿಯುಕ್ತಿ ಗೊಂಡಿದ್ದಾರೆ.

<><><>

**7.** ಹಾವೇರಿ ಜಿಲ್ಲೆ, ಸವಣೂರು ತಾಲೂಕು, ಚಳ್ಳಾಳದಲ್ಲಿ ನಿರ್ಮಾಣಗೊಂಡ, ಕೇಂದ್ರ ಆರೋಗ್ಯ ಮಿಶನ್ ಯೋಜನೆಯ, ಆರೋಗ್ಯ ಮತ್ತು ಕ್ಷೇಮ ಕೇಂದ್ರವನ್ನು, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಇಂದು ಉದ್ಘಾಟಿಸಲಿದ್ದಾರೆ.

<><><>

**8.** ದಾವಣಗೆರೆ, ಈಶ್ವರೀಯ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಹಿನ್ನೆಲೆ, ಸಂಸದರಾದ ಪ್ರಭಾ ಮಲ್ಲಿಕಾರ್ಜುನ, ವಿಶೇಷ ಅಂಚೆ ಲಕೋಟೆ ಬಿಡುಗಡೆಗೊಳಿಸಿದರು.

<><><>

**9.** ಇಂದಿಗೆ, ರಾಜ್ಯದ **14** ಜಿಲ್ಲೆಗಳಿಗೆ, ಯೆಲ್ಲೋ ಅಲರ್ಟ್ ಪ್ರಕಟಿಸಲಾಗಿದೆ.

ಉತ್ತರಕನ್ನಡ ಜಿಲ್ಲೆ, ಕಾಳಿ ನದಿ ಪಾತ್ರದ ಜನ ಮುಂಜಾಗ್ರತೆ ವಹಿಸುವಂತೆ, ಕದ್ರಾ ಜಲಾಶಯದ ಅಭಿಯಂತರರು, ಮುನ್ನೆಚ್ಚರಿಕೆ ನೀಡಿದ್ದಾರೆ.

ವಿಜಯನಗರ ಜಿಲ್ಲೆ, ಹೊಸಪೇಟೆಯ, ತುಂಗಭದ್ರಾ ಜಲಾಶಯ ವ್ಯಾಪ್ತಿಯ, ಹಂಪಿಯ ಪುರಂದರ ಮಂಟಪ ಮುಳುಗಡೆಯಾಗಿದೆ. ನದಿಪಾತ್ರದ ಜನ ಮುಂಜಾಗ್ರತೆ ವಹಿಸುವಂತೆ, ತುಂಗಭದ್ರಾ ಮಂಡಳಿ ಅಭಿಯಂತರ ಕೋರಿದ್ದಾರೆ.

ದಾವಣಗೆರೆ ಜಿಲ್ಲೆಯ, ಹೊನ್ನಾಳಿ, ಹರಿಹರ, ಹರಪನಹಳ್ಳಿ ತಾಲೂಕಿನ, ತುಂಗಭದ್ರಾ ನದಿಪಾತ್ರದ ಜನ, ಜಾಗ್ರತೆ ವಹಿಸುವಂತೆ, ಭದ್ರಾ ಯೋಜನೆ ಅಧೀಕ್ಷಕ ಅಭಿಯಂತರರು, ಮನವಿ ಮಾಡಿದ್ದಾರೆ.

ಬಾಗಲಕೋಟೆ ಜಿಲ್ಲೆಯಲ್ಲಿ, ಆರಿದ್ರಾ ಮಳೆ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು, ತಾಲೂಕು ಅಧಿಕಾರಿಗಳು ಸನ್ನದ್ಧರಾಗಿರುವಂತೆ, ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ, ಜಿಲ್ಲಾಧಿಕಾರಿ ಸಂಗಪ್ಪ ಆದೇಶಿಸಿದ್ದಾರೆ.

<><><>

**10.** ಕಲ್ಯಾಣ ಕರ್ನಾಟಕ ಹಸಿರು ಪಥ ಯೋಜನೆ ಹಾಗೂ ರಾಜ್ಯ ವನ ಮಹೋತ್ಸವಕ್ಕೆ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಇಂದು ಮಧ್ಯಾಹ್ನ **12.30**ಕ್ಕೆ, ಕಲಬುರಗಿಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ, ಚಾಲನೆ ನೀಡಲಿದ್ದಾರೆ.

<><><>

**12.** ಎರಡನೇ ಆವೃತ್ತಿಯ, ಪ್ರಧಾನಮಂತ್ರಿ ಆವಾಸ್ ನಗರ ಯೋಜನೆಯಡಿ, ಕಲಬುರಗಿ ಜಿಲ್ಲೆ, ಶಹಾಬಾದ ಪಟ್ಟಣದಲ್ಲಿ, ಅರ್ಹ ನಾಗರಿಕರಿಂದ ಆನ್‌ಲೈನ್ ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ ಎಂದು, ಪೌರಾಯುಕ್ತರು ತಿಳಿಸಿದ್ದಾರೆ.

<><><>

**13.** ಸ್ವಾಮಿ ವಿವೇಕಾನಂದರ ಪುಣ್ಯ ಸ್ಮರಣೆ ಹಿನ್ನೆಲೆ, ಧಾರವಾಡದ ವಿವೇಕಾನಂದ ಉದ್ಯಾನದಲ್ಲಿ, ಶ್ರೀ ವಿವೇಕಾನಂದರ ಪ್ರತಿಮೆಗೆ, ಹುಬ್ಬಳ್ಳಿ ಧಾರವಾಡ ಮಹಾಪೌರರಾದ ಜ್ಯೋತಿ ಪಾಟೀಲ, ಗೌರವಾರ್ಪಿಸಿದರು.

<><><>

**14. ಬೆಳಗಾವಿ ಜಿಲ್ಲೆ, ಗೋಕಾಕದಲ್ಲಿ, ಶ್ರೀ ಮಹಾಲಕ್ಷ್ಮೀದೇವಿ ಜಾತ್ರೆ ಪ್ರಯುಕ್ತ ನಡೆದ, ರಥೋತ್ಸವದಲ್ಲಿ, ಅಪಾರ ಸಂಖ್ಯೆಯ ಭಕ್ತಾದಿಗಳು, ಭಂಡಾರದಲ್ಲಿ ಮಿಂದೆದ್ದರು.**

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

**ಹರ್ಷ**